**All India Radio: Bangalore**
**National Bulletin In Kannada**
**10.08.2026  1.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**10.08.2026  1.10 hrs**

**<><><*><><<>**

ಮುಖ್ಯಾಂಶಗಳು

**೧. ಸಂಸತ್‌ನಲ್ಲಿ ಪ್ರತಿಪಕ್ಷಗಳಿಂದ ಮುಂದುವರಿದ ಗದ್ದಲ ; ಉಭಯ ಸದನಗಳ ಕಲಾಪ ಮಧ್ಯಾಹ್ನ ೨ ಗಂಟೆಗೆ ಮುಂದೂಡಿಕೆ**

**೨. ಸರ್ಕಾರಿ ಇ-ಮಾರುಕಟ್ಟೆ ಜೆಮ್‌ನ ಒಟ್ಟು ವಹಿವಾಟು ಮೌಲ್ಯ ೧.೫೫ ಲಕ್ಷ ಕೋಟಿ ರೂಪಾಯಿಗೆ ಏರಿಕೆ - ಕೇಂದ್ರ ಸಚಿವ ಪಿಯೂಷ್ ಗೋಯಲ್**

**೩. ಬದಲಾಗುತ್ತಿರುವ ಬೇಡಿಕೆಗೆ ತಕ್ಕಂತೆ ಉತ್ಪನ್ನ ಸಿದ್ಧಪಡಿಸುವಂತೆ ಭಾರತೀಯ ನೇಕಾರರಿಗೆ ಜವಳಿ ಸಚಿವಾಲಯ ಕರೆ**

**೪. ಪ್ರತಿಕೂಲ ಹವಾಮಾನ ಹಾಗೂ ರಸ್ತೆ ಹಾನಿ ಹಿನ್ನೆಲೆ ಅಮರನಾಥ ಯಾತ್ರೆ ಅನಿರ್ಧಿಷ್ಟಾವಧಿಗೆ ಸ್ಥಗಿತ**

**೫. ಡಾಲ್ಫಿನ್ ಚಂಡಮಾರುತದ ಅಬ್ಬರ ; ಪೂರ್ವ ಚೀನಾ ಪ್ರದೇಶಗಳಿಂದ ೧೦ ಲಕ್ಷಕ್ಕೂ ಹೆಚ್ಚು ಜನರ ಸ್ಥಳಾಂತರ**

**<><><*><><<>**

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧದ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಪೊಲೀಸ್ ಬಲಪ್ರಯೋಗ ಹಾಗೂ ಈ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಗೆ ಆಗ್ರಹಿಸಿ, ವಿರೋಧ ಪಕ್ಷಗಳ ಸದಸ್ಯರು ಗದ್ದಲ ಉಂಟುಮಾಡಿದ ಹಿನ್ನೆಲೆ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಲಾಗಿದೆ. ಲೋಕಸಭೆಯಲ್ಲಿ ೧೧ ಗಂಟೆಗೆ ಸಭೆ ಸೇರಿದಾಗ ಪೀಠಾಸೀನಾಧಿಕಾರಿ ಎನ್.ಕೆ.ಪ್ರೇಮಚಂದ್ರನ್ ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಿದರು. ಆದರೆ ವಿರೋಧ ಪಕ್ಷಗಳು ವಿದ್ಯಾರ್ಥಿಗಳ ಪ್ರತಿಭಟನೆಯ ವೇಳೆ ಪೊಲೀಸ್ ಬಲಪ್ರಯೋಗ ಹಾಗೂ ಈ ವಿಷಯ ಕುರಿತಂತೆ ಕೇಂದ್ರ ಸಚಿವರ ಹೇಳಿಕೆಗೆ ಆಗ್ರಹಿಸಿ ಪ್ರತಿಭಟಿಸಿದರು. ಇದೆಲ್ಲದರ ನಡುವೆ ಸದನವನ್ನು ಮೊದಲಿಗೆ ೧೨ ಗಂಟೆಗೆ

ಮುಂದೂಡಲಾಯಿತು. ರಾಜ್ಯಸಭೆಯಲ್ಲೂ ಇದೇ ರೀತಿಯ ವಾತಾವರಣ ಕಂಡುಬಂತು ೧೧ ಗಂಟೆಗೆ ಸದನ ಸಭೆ ಸೇರಿದಾಗ ಸಚಿವರು ತಮ್ಮ ಸಚಿವಾಲಯಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಮಂಡಿಸಿದರು. ಬಳಿಕ, ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಶೂನ್ಯವೇಳೆ ಕಲಾಪ ಕೈಗೆತ್ತಿಕೊಂಡರು. ಈ ವೇಳೆ ಬಿಜೆಯ ಕಾರ್ಯಕರ್ತ ತರುಣ್ ಚುಗ್ ಅವರು, ಪಂಜಾಬ್‌ನಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಕುಸಿತ ಹಾಗೂ ಹೆಚ್ಚುತ್ತಿರುವ ಮಾದಕದ್ರವ್ಯ ಜಾಲದ ವಿಷಯವನ್ನು ಪ್ರಸ್ತಾಪಿಸಿದರು. ಅತಿಯಾದ ಮಾದಕದ್ರವ್ಯ ಸೇವನೆಯಿಂದಾಗಿ ಒಂದೇ ವರ್ಷದಲ್ಲಿ ೮೯ ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಿದ ಅವರು, ಅಲ್ಲಿನ ಸರ್ಕಾರ ಈ ಪಿಡುಗನ್ನು ತಡೆಯಲು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ಬಳಿಕವೂ, ಪ್ರತಿಪಕ್ಷಗಳ ಗದ್ದಲ ಮುಂದುವರಿದ ಹಿನ್ನೆಲೆ ಕಲಾಪವನ್ನು ಮುಂದೂಡಲಾಯಿತು.

**<>><><*><><<>**

ಸರ್ಕಾರಿ ಇ-ಮಾರುಕಟ್ಟೆ ಜೆಮ್ ನ ಒಟ್ಟು ವಹಿವಾಟು ಮೌಲ್ಯ ಕಳೆದ ಒಂದು ದಶಕದಲ್ಲಿ ೪೨೨ ಕೋಟಿ ರೂಪಾಯಿಗಳಿಂದ ೧.೫೫ ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವರು, ಪ್ರಸ್ತುತ ಈ ಪೋರ್ಟಲ್‌ನಲ್ಲಿ ೧೨ ಲಕ್ಷಕ್ಕೂ ಹೆಚ್ಚು ಅತಿಸಣ್ಣ ಮತ್ತು ಸಣ್ಣ ಉದ್ಯಮಗಳು ನೋಂದಾಯಿಸಿಕೊಂಡಿವೆ. ಇವುಗಳಲ್ಲಿ ೨ ಲಕ್ಷಕ್ಕೂ ಹೆಚ್ಚು ಮಹಿಳಾ ನೇತೃತ್ವದ ಉದ್ಯಮಗಳು ಹಾಗೂ ೪೨ ಸಾವಿರಕ್ಕೂ ಅಧಿಕ ನವೋದ್ಯಮಗಳು ಸೇರಿವೆ ಎಂದಿದ್ದಾರೆ. ಕಳೆದ ೧೦ ವರ್ಷಗಳಲ್ಲಿ ಈ ಪೋರ್ಟಲ್ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿದ್ದು, ಸೂಕ್ತ ಬೆಲೆ ಕಂಡುಕೊಳ್ಳಲು ನೆರವಾಗಿದೆ, ಖರೀದಿ ಪ್ರಕ್ರಿಯೆಯ ಸಮಯವನ್ನು ತಗ್ಗಿಸಿದೆ ಮತ್ತು ಸರ್ಕಾರಕ್ಕೆ ಗಮನಾರ್ಹ ಉಳಿತಾಯ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ. ವೋಕಲ್ ಫಾರ್ ಲೋಕಲ್ ಮತ್ತು ಮೇಕ್ ಇನ್ ಇಂಡಿಯಾ ಪರಿಕಲ್ಪನೆಗೆ ಉತ್ತೇಜನ ನೀಡುವ ಮೂಲಕ ಜೆಮ್ ವಿಕಸಿತ ಭಾರತದ ಅಡಿಪಾಯವನ್ನು ಬಲಪಡಿಸುತ್ತದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

**<>><><*><><<>**

ಭಾರತೀಯ ನೇಕಾರರು ಮತ್ತು ವಿನ್ಯಾಸಕಾರರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಮಾರುಕಟ್ಟೆಯ ಬದಲಾಗುತ್ತಿರುವ ಬೇಡಿಕೆಗಳನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ಉತ್ಪನ್ನಗಳನ್ನು ಸಿದ್ಧಪಡಿಸಬೇಕು ಎಂದು ಜವಳಿ ಸಚಿವಾಲಯದ ಕಾರ್ಯದರ್ಶಿ ನೀಲಂ ಶಮಿ ರಾವ್ ತಿಳಿಸಿದ್ದಾರೆ.

ನವದೆಹಲಿಯಲ್ಲಿಂದು ರಾಷ್ಟ್ರೀಯ ಕೈಮಗ್ಗ ವಿನ್ಯಾಸಕರ ಸಮಾವೇಶದ ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅವರು, ಕೈಮಗ್ಗ ವಲಯದಲ್ಲಿ ವಿನ್ಯಾಸ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ನೇಕಾರರು ಉತ್ಪನ್ನಗಳ ವಿನ್ಯಾಸಗಳನ್ನು ಸುಧಾರಿಸುವ ಮೂಲಕ ತಮ್ಮ ಸರಕುಗಳ ಮಾರಾಟವನ್ನು ಹೆಚ್ಚಿಸಿಕೊಳ್ಳಬಹುದು ಎಂದರು. ಇದೇ ವೇಳೆ ಅವರು, ಕ್ಷೇತ್ರದಲ್ಲಿ ಸಾಧಿಸಿರುವ ಕೌಶಲ್ಯ ಮತ್ತು ಶ್ರೇಷ್ಠತೆಗಾಗಿ ದೇಶಾದ್ಯಂತದ ನೇಕಾರರು ಮತ್ತು ವಿನ್ಯಾಸಕಾರರನ್ನು ಶ್ಲಾಘಿಸಿದರು. ಈ ಸಮಾವೇಶ ನೇಕಾರರಿಗೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರುಕಟ್ಟೆ ಪ್ರವೇಶ ಪಡೆಯಲು ಉತ್ತಮ ಅವಕಾಶ ಒದಗಿಸಿದೆ. ಕಾರ್ಯಕ್ರಮದಲ್ಲಿ ಜವಳಿ ಕಾರ್ಯದರ್ಶಿಗಳು, ರಾಷ್ಟ್ರೀಯ ಕೈಮಗ್ಗ ವಿನ್ಯಾಸ ಸ್ಪರ್ಧೆಯ ವಿಜೇತರನ್ನು ಸನ್ಮಾನಿಸಿದರು.

**<><><*><><<>**

ನೌಕಾಪಡೆ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಇಂದಿನಿಂದ ೪ ದಿನಗಳ ಅಧಿಕೃತ ಮಾರಿಷಿಯಸ್ ಪ್ರವಾಸ ಕೈಗೊಂಡಿದ್ದಾರೆ. ಈ ಭೇಟಿ ಮಾರಿಷಿಯಸ್‌ನೊಂದಿಗಿನ ದ್ವಿಪಕ್ಷೀಯ ಕಡಲು ಸಹಕಾರ ಮತ್ತು ರಕ್ಷಣಾ ಸಂಬಂಧಗಳ ಬಲವರ್ಧನೆ ಎಡೆಗಿನ ಭಾರತದ ಪ್ರಯತ್ನಗಳ ಭಾಗವಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ತಮ್ಮ ಭೇಟಿಯ ವೇಳೆ, ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಮಾರಿಷಿಯಸ್‌ನ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲಿದ್ದು, ಕಡಲ ಭದ್ರತೆ, ರಕ್ಷಣಾ ಸಹಕಾರ, ಸಾಮರ್ಥ್ಯವೃದ್ಧಿ ಮತ್ತು ಮಿಲಿಟರಿ ಸಹಭಾಗಿತ್ವ ಸೇರಿದಂತೆ ವಿವಿಧ ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ.

<><><*><><<>

ಉತ್ತರ ಕಾಶ್ಮೀರದ ಬಲ್ತಾಲ್ ಹಾಗೂ ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಮಾರ್ಗಗಳಲ್ಲಿ ರಸ್ತೆಗಳು ತೀವ್ರವಾಗಿ ಹಾನಿಗೊಳಗಾಗಿರುವ ಹಿನ್ನೆಲೆಯಲ್ಲಿ ಮತ್ತು ಪ್ರತಿಕೂಲ ಹವಾಮಾನ ಮುನ್ಸೂಚನೆಯಿಂದಾಗಿ ಈ ವರ್ಷದ ಅಮರನಾಥ ಯಾತ್ರೆಯನ್ನು ಅನಿರ್ದಿಷ್ಟಾವಧಿಗೆ ಸ್ಥಗಿತಗೊಳಿಸಲಾಗಿದೆ. ಮಾರ್ಗಗಳನ್ನು ಸರಿಪಡಿಸಲು ಹೆಚ್ಚಿನ ಸಮಯ ಅಗತ್ಯವಿರುವ ಹಾಗೂ ಯಾತ್ರಿಕರ ಸುರಕ್ಷತೆಯನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವರ್ಷದ ನೋಂದಣಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದ್ದು, ಇನ್ನು ಮುಂದೆ ಕಣಿವೆ ಪ್ರದೇಶಕ್ಕೆ ಯಾತ್ರಿಕರ ಪ್ರವೇಶವನ್ನು ಅನುಮತಿಸುವುದಿಲ್ಲ. ಆದರೆ ಆಚರಣೆಯ ಭಾಗವಾಗಿ ಛಡಿ ಮುಬಾರಕ್ ಎಂಬ ಭಗವಾನ್ ಶಿವನ ಪವಿತ್ರ ತ್ರಿಶೂಲ್ ಆಚರಣೆ ಸಾಂಪ್ರದಾಯಿಕ ಪಹಲ್ಗಾಮ್ ಮಾರ್ಗದಲ್ಲಿ ಸಾಗಿ ಇದೇ ೨೮ ರಂದು ಗುಹಾಂತರ ದೇವಾಲಯ

ತಲುಪಲಿದ್ದು, ಅಂದು ಯಾತ್ರೆಗೆ ಅಧಿಕೃತ ತೆರೆ ಬೀಳಲಿದೆ. ಇದೂವರೆಗೆ ೪.೮೦ ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಪವಿತ್ರ ಹಿಮಲಿಂಗದ ದರ್ಶನ ಪಡೆದಿದ್ದಾರೆ.

<>><><*><><<>

'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ 'ವಿಕಸಿತ ಭಾರತ' ನಿರ್ಮಾಣಕ್ಕೆ ಕೊಡುಗೆ ನೀಡುವ ಸಾಮೂಹಿಕ ಸಂಕಲ್ಪವನ್ನು ಪುನರುಜ್ಜೀವನಗೊಳಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, ತ್ರಿವರ್ಣ ಧ್ವಜ, ರಾಷ್ಟ್ರದ ಹೆಮ್ಮೆಯ ಸಂಕೇತವಾಗಿದ್ದು, ದೇಶಕ್ಕಾಗಿ ಸದಾ ಅತ್ಯುತ್ತಮ ಸೇವೆಯನ್ನು ನೀಡಲು ಪ್ರೇರಣೆಯ ಮೂಲವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯಗೀತೆ 'ವಂದೇ ಮಾತರಂ' ತನ್ನ ೧೫೦ನೇ ವರ್ಷಾಚರಣೆಯನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ, ಪ್ರಸಕ್ತ ಸಾಲಿನ ಅಭಿಯಾನವನ್ನು 'ವಂದೇ ಮಾತರಂ'ಗೆ ಸಮರ್ಪಿಸಲಾಗುತ್ತಿರುವುದಕ್ಕೆ ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ. ಸಂಸ್ಕೃತಿ ಸಚಿವಾಲಯ, ಈ ವರ್ಷದ 'ಹರ್ ಘರ್ ತಿರಂಗಾ' ಅಭಿಯಾನದ ಮೂಲಕ ದೇಶಾದ್ಯಂತ ತಿರಂಗಾ ಯಾತ್ರೆಗಳು, ತಿರಂಗಾ ರ್‍ಯಾಲಿಗಳು, ತಿರಂಗಾ ಸಂಗೀತ ಕಚೇರಿಗಳು ಹಾಗೂ 'ವಂದೇ ಮಾತರಂ' ಸಾಮೂಹಿಕ ಗಾಯನದ ಮೂಲಕ ರಾಷ್ಟ್ರಭಕ್ತಿಯ ಭಾವನೆಯನ್ನು ಮೂಡಿಸಲು ಯೋಜಿಸಿದೆ ಎಂದು ಸಚಿವಾಲಯ ತಿಳಿಸಿದೆ. ಈ ಬಾರಿಯ ಆಚರಣೆಯ ಪ್ರಮುಖ ಆಕರ್ಷಣೆಯಾಗಿ 'ಸೂರ್ಯಪಥ್ ತಿರಂಗಾ' ಎಂಬ ನೂತನ ಉಪಕ್ರಮವನ್ನು ಪರಿಚಯಿಸಲಾಗಿದ್ದು, ಇದು ಪ್ರಪಂಚದಾದ್ಯಂತ ಇರುವ ಭಾರತೀಯರನ್ನು ತ್ರಿವರ್ಣ ಧ್ವಜದ ಜಾಗತಿಕ ಸಂಭ್ರಮಾಚರಣೆಯಲ್ಲಿ ಒಂದಾಗಿಸುವ ವಿಶಿಷ್ಟ ಪ್ರಯತ್ನವಾಗಿದೆ. ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ, ತಮ್ಮ ಸೆಲ್ಫಿಗಳನ್ನು 'ಹರ್ ಘರ್ ತಿರಂಗಾ' ಜಾಲತಾಣದಲ್ಲಿ ಅಪ್‌ಲೋಡ್ ಮಾಡುವಂತೆ ಸಚಿವಾಲಯ ಮನವಿ ಮಾಡಿದೆ.

<>><><*><><<>

ಚೀನಾದಲ್ಲಿ ಡಾಲ್ಫಿನ್ ಚಂಡಮಾರುತ, ಶಾಂಘೈ ಕರಾವಳಿಗೆ ಅಪ್ಪಳಿಸಿರುವ ಹಿನ್ನೆಲೆಯಲ್ಲಿ ಶಾಂಘೈ ನಗರ ಸೇರಿದಂತೆ ಪೂರ್ವ ಚೀನಾದ ವಿವಿಧ ಪ್ರದೇಶಗಳಿಂದ ೧೦ ಲಕ್ಷಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಭಾರೀ ಮಳೆ ಹಾಗೂ ಬಿರುಗಾಳಿಯಿಂದಾಗಿ ಈ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಸಂಪೂರ್ಣವಾಗಿ ವ್ಯತ್ಯಯವಾಗಿದ್ದು, ಶಾಂಘೈ ಒಂದರಲ್ಲಿ ಸುಮಾರು ೧ ಸಾವಿರ ವಿಮಾನಗಳ ಸಂಚಾರ ರದ್ದಾಗಿದೆ. ವಿವಿಧ ಪ್ರಾಂತ್ಯಗಳಲ್ಲಿ ಭಾರೀ ಮಳೆ ಮುಂದುವರೆಯಲಿದ್ದು, ಡಿಸ್ನಿಲ್ಯಾಂಡ್, ಲೆಗೊಲ್ಯಾಂಡ್ ಸೇರಿದಂತೆ ಪ್ರಸಿದ್ಧ ಪ್ರವಾಸಿ ತಾಣಗಳನ್ನು

ಮುಚ್ಚಲಾಗಿದೆ. ಪ್ರಸ್ತುತ ಈ ಚಂಡಮಾರುತದ ತೀವ್ರತೆ ಕೊಂಚ ತಗ್ಗಿದೆ. ಈ ವರ್ಷ ಚೀನಾಗೆ ಅಪ್ಪಳಿಸಿದ ಅತ್ಯಂತ ಪ್ರಬಲ ಚಂಡಮಾರುತ ಇದಾಗಿದೆ.

<>><><*><><<>

ಇಂದು ವಿಶ್ವ ಸಿಂಹಗಳ ದಿನಾಚರಣೆ. ಆಫ್ರಿಕಾ ಮತ್ತು ಏಷ್ಯಾ ಸಿಂಹಗಳು ಅವುಗಳ ನೈಸರ್ಗಿಕ ಆವಾಸ ಸ್ಥಾನ ರಕ್ಷಣೆ ಮತ್ತು ವನ್ಯಜೀವಿ ಭಾಗಗಳ ಅಕ್ರಮ ವ್ಯಾಪಾರ ನಿಲ್ಲಿಸಲು ಜನ ಜಾಗೃತಿ ಮೂಡಿಸಲು ಈ ದಿನ ಮೀಸಲಾಗಿದೆ. ಅರಣ್ಯಗಳಲ್ಲಿ ವಾಸಿಸುವ ಸಿಂಹಗಳು ಎದುರಿಸುತ್ತಿರುವ ಅಪಾಯಗಳು ಹಾಗೂ ಜೀವ ವೈವಿಧ್ಯತೆಯಲ್ಲಿ ಅವು ವಹಿಸುವ ಪ್ರಮುಖ ಪಾತ್ರದ ಕುರಿತು ಜಾಗೃತಿ ಮೂಡಿಸುವುದು ಈ ದಿನದ ಆಚರಣೆಯ ಉದ್ದೇಶವಾಗಿದೆ. ವಿಶ್ವ ಸಿಂಹ ದಿನದ ಅಂಗವಾಗಿ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಭಾರತದಲ್ಲಿ ಏಷ್ಯಾಟಿಕ್ ಸಿಂಹಗಳ ಸಂತತಿ ಗಮನಾರ್ಹವಾಗಿ ವೃದ್ಧಿಸುತ್ತಿದ್ದು, ಅವುಗಳ ಆವಾಸ ಸ್ಥಾನ ಮತ್ತು ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದೆ ಎಂದು ಹೇಳಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**